ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/42/2016-17. ದಿನಾಂಕ:06-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ಸ್ವಾಮಿಅಯ್ಯಪ್ಪ ತಾಯಿ ಕೊಟ್ರಮ್ಮ<br>2)ಶಿಲ್ಪ ತಾಯಿ ಕೊಟ್ರಮ್ಮ<br>08 ನೇ ವಾರ್ಡ ಅಂಬೇಡ್ಕರ್ ನಗರ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಚಾರೆಮ್ಮ ಗಂಡ ಲೇಟ್ ಕೊಟ್ರಪ್ಪ<br>ಕೊಟ್ಟೂರು ಪಟ್ಟಣ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 106. 128ಬಿ. ವಿಸ್ತೀರ್ಣ 3-26. 0-16. ಸೆಂಟ್ಸು ಜಮೀನುಗಳನ್ನು ವಿಲ್ಲ ನಾಮೇಯಾನೆ ಮರಣ ಶಾಸನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 106. 128ಬಿ. ವಿಸ್ತೀರ್ಣ 3-26. 0-16. ಸೆಂಟ್ಸು ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಸ್ವಾಮಿಅಯ್ಯಪ್ಪ ತಾಯಿ ಕೊಟ್ರಮ್ಮ. ಶಿಲ್ಪ ತಾಯಿ ಕೊಟ್ರಮ್ಮ ಇವರು ದಿನಾಂಕ 17-07-1999 ರ ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ನೋಟಿಸನ್ನು ದಿನಾಂಕ 15-06-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಚಾರೆಮ್ಮ ಗಂಡ ಲೇಟ್ ಕೊಟ್ರಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 86/2015-16. ದಿನಾಂಕ 15-07-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 16-08-2016 ರಿಂದ 06-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಜೋಳದಕೂಡ್ಲಿಗಿ ಗ್ರಾಮದ ಸನಂ 106. 128ಬಿ. ವಿಸ್ತೀರ್ಣ 3-26. 0-16. ಸೆಂಟ್ಸು ಜಮೀನುಗಳು ಅರ್ಜಿದಾರರ ಅಜ್ಜಿಯಾದ ಹರಿಜನ ಲೇಸಿ ಕೆಂಚವ್ವ ತಂದೆ ರಾಂಪುರದ ಕೊಟ್ರಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ಇವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ಅಣ್ಣನ ಮಗನ ಮಗ ಬಸವರಾಜನ ಮಗಳಾದ ಕೊಟ್ರಮ್ಮ ಇವರ ಮಕ್ಕಳಾದ ಸ್ವಾಮಿಅಯ್ಯಪ್ಪ. ಶಿಲ್ಪ ಇವರ ಹೆಸರಲ್ಲಿ ದಿನಾಂಕ 17-07-1999 ರಂದು ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರ ಬರೆಯಸಿ ಕೊಟ್ಟಿರುತ್ತಾರೆ. ಸದರಿಯವರು ದಿನಾಂಕ 17-11-2014 ರಂದು ನಿಧನ ಹೊಂದಿರುತ್ತಾರೆ. ಕಾರಣ ಸದರಿ ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರ ಪ್ರಕಾರ ಅರ್ಜಿದಾರರಾದ ಸ್ವಾಮಿ ಅಯ್ಯಪ್ಪ ತಾಯಿ ಕೊಟ್ರಮ್ಮ. ಶಿಲ್ಪ ತಾಯಿ ಕೊಟ್ರಮ್ಮ. ಇವರ ಹೆಸರುಗಳಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ:-2

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಮೃತ ಖಾತೆದಾರರಿಗೆ ಇಬ್ಬರು ಹೆಂಡತಿಯರಿದ್ದು ನಮಗೂ ವಿವಾದಿತ ಜಮೀನುಗಳಲ್ಲಿ ಅರ್ಧ ಹಿಸ್ಸಾ ಬರಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಖಾತೆದಾರರಾದ ಲೇಸಿ ಕೆಂಚವ್ವ ಇವರಿಗೆ ವಿವಾದಿತ ಜಮೀನುಗಳು ಸರ್ಕಾರದಿಂದ ಮಂಜೂರಾದ ಜಮೀನುಗಳು ಆಗಿದ್ದು ಅದು ಅವರ ತಂದೆಯಾದ ಕೊಟ್ರಪ್ಪ ಇವರಿಂದ ಪಿತ್ರಾರ್ಜಿತವಾಗಿ ಬಂದ ಜಮೀನುಗಳಾಗಿರುವುದಿಲ್ಲ ಕಾರಣ ಅದನ್ನು ವಿಲ್ಲು ಮೂಲಕ ವರ್ಗಾವಣೆ ಮಾಡುವ ಹಕ್ಕು ಖಾತೆದಾರರಿಗೆ ಇರುತ್ತದೆ. ಕಾರಣ ತಕರಾರುದಾರರು ಸಲ್ಲಿಸಿರುವ ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 106. 128ಬಿ. ವಿಸ್ತೀರ್ಣ 3-26. 0-16. ಸೆಂಟ್ಸು ಜಮೀನುಗಳನ್ನು ದಿನಾಂಕ 17-11-1999 ರ ವಿಲ್ಲು ನಾಮೆಯಾನೆ ಮರಣ ಶಾಸನ ಪತ್ರ ಪ್ರಕಾರ ಅರ್ಜಿದಾರರಾದ ಸ್ವಾಮಿಅಯ್ಯಪ್ಪ ತಾಯಿ ಕೊಟ್ರಮ್ಮ. ಶಿಲ್ಪ ತಾಯಿ ಕೊಟ್ರಮ್ಮ. ಕೊಟ್ಟೂರು ಪಟ್ಟಣ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸ್ವಾಮಿಅಯ್ಯಪ್ಪ ತಾಯಿ ಕೊಟ್ರಮ್ಮ. ಶಿಲ್ಪ ತಾಯಿ ಕೊಟ್ರಮ್ಮ. 06 ನೇ ವಾರ್ಡ ಅಂಬೇಡ್ಕರ್ ನಗರ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಚಾರೆಮ್ಮ ತಂದೆ ಲೇಟ್ ಕೊಟ್ರಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.